ಫ್ಯಾಕ್ಸ್ : 0816-2255761
ದೂರವಾಣಿ : 2272280

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು - 572 103
email : tudatmk2009@yahoo.co.in; website : tuda.co.in.

ಸಂಖ್ಯೆ ತುನಪ್ರಾ/ನಯೋ/ವಿನ್ಯಾಸ/**322**/2020-21 3089 ದಿನಾಂಕ 13-12-2022

:ವಸತಿ ವಿನ್ಯಾಸ ಅಂತಿಮ ಅನುಮೋದನೆ:

ವಿಷಯ : ತುಮಕೂರು ತಾಲ್ಲೂಕು, ಕಸಬಾ ಉತ್ತರ ಹೋಬಳಿ, **ತುಮಕೂರು ಅಮಾನಿಕೆರೆ** ಗ್ರಾಮದ ಸರ್ವೆ ನಂಬರ್ **15/1ಎ** ರಲ್ಲಿ **0-28** ಗುಂಟೆ ಮತ್ತು ಸ.ನಂ.**15/3** ರಲ್ಲಿ **0-34** ಗುಂಟೆ ಒಟ್ಟು **1** ಎಕರೆ **22** ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ವಸತಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ :
1. ಅರ್ಜಿದಾರರಾದ ಶ್ರೀಮತಿ ಕೆ.ಪಿ.ಶೈಲಜ ಕೋಂ ಕೆ.ಪಿ.ಶಶಿಧರ್ ಮತ್ತು ಇತರರು ಮನವಿ ದಿನಾಂಕ **29-03-2021**
2. ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ಇವರ ಕಛೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ 216867, ದಿನಾಂಕ 26-02-2021 ಮತ್ತು ಲ್ಯಾಂಡ್10010317, ದಿನಾಂಕ 04-01-2019
3. ದಿನಾಂಕ : **26-07-2021** ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ : **(97)** ರ ನಿರ್ಣಯ
4. ಈ ಕಛೇರಿಯ ಪತ್ರ ಸಂಖ್ಯೆ ಟಿಯುಡಿಎ/ಎಲ್ಎಓ/**322**/2020-21/1716 ದಿನಾಂಕ **08-12-2021**
5. ಅರ್ಜಿದಾರರ ಮನವಿ ದಿನಾಂಕ **13-05-2022**
6. ಆಯುಕ್ತರು, ಮಹಾನಗರಪಾಲಿಕೆ, ತುಮಕೂರು ಇವರ ಪತ್ರ ಸಂಖ್ಯೆ ತುಮಪಾ/ತಾಂಶಾ/ನಿಪತ್ರ/1/2022-23 ದಿನಾಂಕ : 16-09-2022
7. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ.), ನಗರ ಉಪವಿಭಾಗ-1, ಬೆವಿಕಂ, ತುಮಕೂರು ಇವರ ಪತ್ರ ಸಂಖ್ಯೆ ಸಕಾನಿಇಂ(ವಿ)/ನಉವಿ-1/ತು/2022-23/741 ದಿನಾಂಕ **16-05-2022**
8. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ತುಮಕೂರು ಇವರ ಪತ್ರ ಸಂಖ್ಯೆ ಕನನೀಸ ಮತ್ತು ಒಚ ಮಂ./ತುಮರು/ಕಾಅ/ತಾಂಶಾ/ತಾಂಸ/ಸ.ಅ-2/ಪ್ರೈ.ಲೇ/579/2022-23 ದಿನಾಂಕ : 29-07-2022
9. ದಿನಾಂಕ **17-05-2022** ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ **(50)** ರ ನಿರ್ಣಯ.

* * * * *

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿ ತುಮಕೂರು ತಾಲ್ಲೂಕು, ಕಸಬಾ ಉತ್ತರ ಹೋಬಳಿ, ತುಮಕೂರು ಅಮಾನಿಕೆರೆ ಗ್ರಾಮದ ಸರ್ವೆ ನಂಬರ್ 15/1ಎ ರಲ್ಲಿ 0-28 ಗುಂಟೆ ಮತ್ತು ಸ.ನಂ.15/3 ರಲ್ಲಿ 0-34 ಗುಂಟೆ ಒಟ್ಟು 1 ಎಕರೆ 22 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದಿಸಲು ಕೋರಿರುತ್ತಾರೆ. ಉಲ್ಲೇಖ (2) ರಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಸದರಿ ಜಮೀನಿಗೆ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿರುತ್ತಾರೆ. ಉಲ್ಲೇಖ (3) ರ ಪ್ರಾಧಿಕಾರದ ಸಭೆಯ ನಿರ್ಣಯದಂತೆ ಸದರಿ ಜಮೀನಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17(2ಎ) ಮತ್ತು ಕರ್ನಾಟಕ

ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ರ ಕಲಂ 32(5) ರಡಿ ಉಲ್ಲೇಖ (4) ರಲ್ಲಿ ವಸತಿ ವಿನ್ಯಾಸ ನಕ್ಷೆಯ ಕರಡು ಅನುಮೋದನೆ ನೀಡಲಾಗಿತ್ತು.

ಉಲ್ಲೇಖ (5) ರಲ್ಲಿ ಅರ್ಜಿದಾರರು ಸದರಿ ಬಡಾವಣೆಯಲ್ಲಿ ಎಲ್ಲಾ ಕಾಮಗಾರಿಗಳನ್ನು ಕೈಗೊಂಡು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿರುವುದಾಗಿ ತಿಳಿಸಿ, ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಈ ಸಂಬಂಧ ಬಡಾವಣೆಯ ವಿವಿಧ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವುದಕ್ಕೆ ಸಕ್ಷಮ ಪ್ರಾಧಿಕಾರಗಳಿಂದ ಉಲ್ಲೇಖ (6), (7) ಮತ್ತು (8) ರಲ್ಲಿ ಮುಕ್ತಾಯ ಪ್ರಮಾಣ ಪತ್ರ / ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸಿರುತ್ತಾರೆ. ಪ್ರಾಧಿಕಾರದ ತಾಂತ್ರಿಕ ಶಾಖೆಯು ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ವರದಿ ಸಲ್ಲಿಸಿರುತ್ತಾರೆ. ಉಲ್ಲೇಖ (9) ರ ಪ್ರಾಧಿಕಾರದ ಸಭೆಯಲ್ಲಿ ಸದರಿ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಲು ತೀರ್ಮಾನಿಸಲಾಗಿದೆ. ತದನಂತರ ಪ್ರಾಧಿಕಾರದ ಸೂಚನೆಯಂತೆ ಅರ್ಜಿದಾರರು ರಸ್ತೆ ಮತ್ತು ಉದ್ಯಾನವನ ಜಾಗೆಗಳನ್ನು ಆಯುಕ್ತರು, ಮಹಾನಗರಪಾಲಿಕೆ, ತುಮಕೂರು ರವರ ಹೆಸರಿಗೆ ದಸ್ತಾವೇಜು ಸಂಖ್ಯೆ TMK-1-15345-2022-23 ಆಗಿ ಸಿ.ಡಿ.ನಂಬರ್ TMKD1830 ದಿನಾಂಕ 10–11–2022 ರಲ್ಲಿ ಹಸ್ತಾಂತರಿಸಿ ನೊಂದಾಯಿತ ಪರಿತ್ಯಾಜನಾ ಪತ್ರವನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಜಮೀನಿನ ಅಂತಿಮ ಅನುಮೋದನೆ ವಿನ್ಯಾಸದಲ್ಲಿ ವಸತಿ ಉದ್ದೇಶಕ್ಕಾಗಿ **3136.27** ಚ.ಮೀ. (ಶೇಕಡ **50.00**), ಉದ್ಯಾನವನ/ಬಯಲು ಜಾಗೆ ಉದ್ದೇಶಕ್ಕಾಗಿ **229.47** ಚ.ಮೀ. (ಶೇಕಡ **03.65**) ಮತ್ತು ರಸ್ತೆ ಉದ್ದೇಶಕ್ಕಾಗಿ **2906.80** ಚ.ಮೀ. (ಶೇಕಡ **46.35**) ಪ್ರದೇಶ ನಿಗದಿಪಡಿಸಿದೆ. ವಸತಿಗಾಗಿ ಕಾಯ್ದಿರಿಸಿರುವ ವಿಸ್ತೀರ್ಣದಲ್ಲಿ 09.14*12.19 ಮೀ. ಅಳತೆಯ **13** ನಿವೇಶನಗಳು, 09.14*ಅನಿಯತ ಅಳತೆಯ **04** ನಿವೇಶನಗಳು, 12.19*ಅನಿಯತ ಅಳತೆಯ **03** ನಿವೇಶನಗಳು ಮತ್ತು ಅನಿಯತ ಅಳತೆಯ **11** ನಿವೇಶನಗಳು ಸೇರಿದಂತೆ ಒಟ್ಟು **31** ನಿವೇಶನಗಳಿರುತ್ತವೆ.

ಸದರಿ ವಸತಿ ವಿನ್ಯಾಸವನ್ನು ಕಾರ್ಯರೂಪಕ್ಕೆ ತರಲು ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ.

1. ಪ್ರಾಧಿಕಾರದ ಪೂರ್ವಾನುಮತಿ ಪಡೆಯದೇ ಈ ಅನುಮೋದಿತ ವಿನ್ಯಾಸದಲ್ಲಿ ಯಾವುದೇ ಬದಲಾವಣೆ ಮಾಡತಕ್ಕದ್ದಲ್ಲ.
2. ವಿನ್ಯಾಸವನ್ನು ಯಾವುದೇ ಕಟ್ಟಡ ಕಟ್ಟುವ ಮೊದಲು ಸಂಬಂಧಪಟ್ಟ ಗ್ರಾಮ ಪಂಚಾಯ್ತಿ / ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆಯಂತೆ ಅನುಮತಿಯನ್ನು ಪಡೆಯತಕ್ಕದ್ದು.
3. ಈ ಅನುಮೋದಿತ ವಿನ್ಯಾಸದಲ್ಲಿ ಮಳೆನೀರು ಸಂಗ್ರಹಣಾ ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸುವುದು ಹಾಗೂ ವಿನ್ಯಾಸದಲ್ಲಿ ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
4. ಈ ವಿನ್ಯಾಸದ ಸುತ್ತಲೂ ಕಾಂಪೌಂಡ್ ನಿರ್ಮಿಸಿ, ಗೇಟ್ ಅನ್ನು ಅಳವಡಿಸಿ ಗೇಟೆಡ್ ಕಮ್ಯೂನಿಟಿ ಎಂಬ ಹೆಸರಿನಲ್ಲಿ ನಿವೇಶನಗಳನ್ನು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಈ ಅನುಮೋದಿತ ವಸತಿ ವಿನ್ಯಾಸದಲ್ಲಿನ ರಸ್ತೆಗಳು, ಸಾರ್ವಜನಿಕ ರಸ್ತೆಗಳಾಗಿದ್ದು ಇವುಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ಮಾತ್ರ ಮುಕ್ತವಾಗಿಡತಕ್ಕದ್ದು. ಈ ರಸ್ತೆಗಳಿಗೆ ಅಡ್ಡವಾಗಿ ತಡೆಗೋಡೆಯನ್ನು ನಿರ್ಮಿಸತಕ್ಕದ್ದಲ್ಲ ಹಾಗೂ ಈ ರಸ್ತೆಗಳಿಂದ ಅಕ್ಕಪಕ್ಕದ ಜಮೀನುಗಳಿಗೆ ಇರುವ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಭಂದಿಸತಕ್ಕದ್ದಲ್ಲ.
5. ಈ ಅನುಮೋದನೆಯು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸುವ ಸಲುವಾಗಿ ಉಪಯೋಗಿಸಲು ಬರುವುದಿಲ್ಲ ಹಾಗೂ ಈ ಜಮೀನುಗಳಿಗೆ ಸಂಬಂಧಿಸಿದ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಪ್ರಾಧಿಕಾರವು ಹೊಣೆಯಾಗುವುದಿಲ್ಲ.

6. ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು, 2017 ಅಡಿಯಲ್ಲಿ ಸ್ಥಾಪಿಸಲಾಗಿರುವ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ "ಈ ಅನುಮೋದಿತ ವಸತಿ ವಿನ್ಯಾಸ / ಬಡಾವಣೆಯನ್ನು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಲು ಹಾಗೂ ನೋಂದಣಿ ನಂತರವೇ ವಿನ್ಯಾಸ / ಬಡಾವಣೆಯ ನಿವೇಶನಗಳ ವ್ಯವಹಾರದ ಕುರಿತು ಜಾಹೀರಾತು, ಬುಕ್ಕಿಂಗ್ ಹಾಗೂ ಮಾರಾಟವನ್ನು ಮಾಡತಕ್ಕದ್ದು"
7. ಈ ವಸತಿ ಬಡಾವಣೆಯಿಂದ ನೀರು ಸೌಲಭ್ಯಕ್ಕೆ ಒಳಚರಂಡಿ ವ್ಯವಸ್ಥೆಗೆ ಸಂಬಂಧಪಟ್ಟಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ತುಮಕೂರು ರವರ ಪತ್ರ ಸಂಖ್ಯೆ ಕನನೀಸ ಮತ್ತು ಒಚ ಮಂ./ತುಮರು/ಕಾಅ/ತಾಂಶಾ/ತಾಂಸ/ಸ.ಅ–2/ಪ್ರೈ.ಲೇ/579/2022–23 ದಿನಾಂಕ : 29–07–2022 ರಲ್ಲಿನ ನಿಬಂಧನೆಗಳನ್ನು ಪಾಲಿಸತಕ್ಕದ್ದು.
8. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.
9. ಪ್ರಶ್ನಿತ ಜಮೀನಿನ ಉತ್ತರಕ್ಕೆ ಇರುವ ಹಳ್ಳಕ್ಕೆ ಪಾಲಿಕೆಯಿಂದ ಸೇತುವೆ ಮತ್ತು ಕಾಂಕ್ರೀಟ್ ರಸ್ತೆ ನಿರ್ಮಿಸಿ ಸಾರ್ವಜನಿಕ ಉಪಯೋಗಕ್ಕೆ ನೀಡೀರುವ, ಬಗ್ಗೆ ಆಯುಕ್ತರು, ಮಹಾನಗರಪಾಲಿಕೆ, ತುಮಕೂರು ಇವರ ಪತ್ರ ಸಂಖ್ಯೆ:ತುಮಪಾ/ತಾಂಶಾ/ಸಿಆರ್/2021–22 ದಿನಾಂಕ 16–09–2021 ರಂದು ನೀಡಿರುವ ಅನುಮತಿ ಪತ್ರದ ಮೇರೆಗೆ ವಸತಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಿದೆ.
10. ಈ ವಿನ್ಯಾಸ ನಕ್ಷೆ ಅನುಮೋದನೆಯ ಸಲುವಾಗಿ ಸಲ್ಲಿಸಲಾಗಿರುವ ಯಾವುದೇ ದಾಖಲಾತಿಗಳು / ಮಾಹಿತಿಗಳು ತಪ್ಪು / ಸುಳ್ಳು / ಪೋರ್ಜರಿಯಾಗಿದ್ದಲ್ಲಿ ಅಥವಾ ಮೇಲ್ಕಂಡ ಯಾವುದೇ ಷರತ್ತು ಉಲ್ಲಂಘನೆ ಆದಲ್ಲಿ ವಿನ್ಯಾಸ ಅನುಮೋದನೆಯು ತಾನೇ ತಾನಾಗಿ ರದ್ದುಗೊಳ್ಳುತ್ತದೆ


13.12.22

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು

ಪ್ರತಿಯನ್ನು :–

1. ಆಯುಕ್ತರು, ಮಹಾನಗರಪಾಲಿಕೆ, ತುಮಕೂರು ಇವರಿಗೆ ವಿನ್ಯಾಸ ನಕ್ಷೆಯೊಂದಿಗೆ ನಿಯಮಾನುಸಾರ ನಿವೇಶನಗಳ ಖಾತಾ ಮಾಡಲು / ಕಟ್ಟಡ ನಿರ್ಮಾಣಕ್ಕೆ ಅನುಮತಿಸಲು ಹಾಗೂ ಸದರಿ ಬಡಾವಣೆಯ ಮುಂದಿನ ನಿರ್ವಹಣೆಗಾಗಿ ಕಳುಹಿಸಲಾಗಿದೆ.
2. ಉಪನೊಂದಣಾಧಿಕಾರಿಗಳು, ತುಮಕೂರು ತಾಲ್ಲೂಕು, ತುಮಕೂರು ರವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
3. ಶ್ರೀ ಕೆ.ಪಿ.ಶಶಿಧರ್ ಬಿನ್ ಕೆ.ಪಿ.ವೀರಭದ್ರಯ್ಯ, ಶ್ರೀಮತಿ ಕೆ.ಪಿ.ಶೈಲಜ ಕೋಂ ಶಶಿಧರ್, ಶ್ರೀ ಎಸ್.ಭಗವಾನ್ ರೇಣುಕ ಬಿನ್ ಲೇ॥ ಸಿರಿಯಪ್ಪ ಒಡೆಯರ್, ಶ್ರೀಮತಿ ಯಶೋದ ಭಗವಾನ್ ಕೋಂ ಎಸ್.ಭಗವಾನ್ ರೇಣುಕ ಮತ್ತು ಶ್ರೀ ನರಸಿಂಹಮೂರ್ತಿ ಬಿನ್ ಕೃಷ್ಣಮೂರ್ತಿ, ಹೊಂಬಯ್ಯನಪಾಳ್ಯ, ಶಿರಾಗೇಟ್, ತುಮಕೂರು ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.
4. ಕಛೇರಿ ಪ್ರತಿ.

ರವಾನಿಸಿದೆ
ದಿನಾಂಕ 13-12-2022



PLOT NO.	AREA (SQ.M)	AREA (SQ.YD)
1	1000.00	1196.00
2	1000.00	1196.00
TOTAL	2000.00	2392.00

PLOT NO.	AREA (SQ.M)	AREA (SQ.YD)	NO OF SITES
1	1000.00	1196.00	1
2	1000.00	1196.00	1
TOTAL	2000.00	2392.00	2

PLOT NO.	AREA (SQ.M)	NO OF SITES
1	1000.00	1
2	1000.00	1
3	600.00	3
4	600.00	11
TOTAL		51

NOTE:

1) The land is converted to Non agriculture (Residential) purpose by C.Tumkur order no. LND/NON/2017 DATED: 04.01.2019 & 21/2017 DATED: 26.03.2021

2) This Layout is approved as per Authority meeting Resolution no. 07 date:26/03/2021

3) Layout Boundary Dimensions, Khatah and Schedule details are as per the Survey sketch enacted by Taluk Office, Tumkur Taluk.

4) All Dimensions are in Meter.

KEY PLAN
Not to scale

LAND USE ANALYSIS			
PLOT USE	LAND USE	AREA (SQ.M)	PERCENTAGE (%)
	RESIDENTIAL	2000.00	50.00
	PARK & OPEN SPACE	1000.00	25.00
	ROAD	1000.00	25.00
TOTAL		4000.00	100.00

TUMKUR URBAN DEVELOPMENT AUTHORITY
TUMAKURU

DRAWN BY	CHECKED BY

RESIDENTIAL LAYOUT PLAN FOR AN EXTENT OF 0.4 - 22 GUNTAS IN SY.NO. 15/1A & 15/2 AT TUMKUR AMANIKERE VILLAGE, KASABA HOBLI, TUMKUR TALUK & DISTRICT.

SCALE: 1:600

Applicant: 1) K.Narasimha Murthy
2) K.P. Shashidhar
3) K.P. Sudha
4) Bhagyavathi
5) Vinuta Bhagawan

DRAWN